ಕರ್ನಾಟಕ ಸರ್ಕಾರ (ಸಿ.ಆರ್.ಪಿ-67)

<table>
<tr><td rowspan="3">ಹೇಳಿಕೆ ಹಾಳೆ<br>(ಆರ್.ಪಿ ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್)</td><td colspan="4">1 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ<br>ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ</td></tr>
<tr><td colspan="4">ಸಿಸಿ ಸಂಖ್ಯೆ 3229/2022</td></tr>
<tr><td></td><td>ಸಿ ಡಬ್ಲ್ಯೂ 1</td><td>ಪಿ ಡಬ್ಲ್ಯೂ</td><td>1</td></tr>
</table>

| | |
|---|---|
| ಸಾಕ್ಷಿಯ ಹೆಸರು | ಶಾನಬಾಯಿ ಸಿದ್ದ ಪೂಜಾರಿ |
| ಗಂಡನ ಹೆಸರು | ಸಿದ್ದ ಪೂಜಾರಿ |
| ವಯಸ್ಸು | 45 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಜನ್ನವಾಡ |

ದಿನಾಂಕ 04.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರು

1. ನನಗೆ ಚಾಸಾ 4 ಗಂಡ. ಚಾಸಾ 5 ಮತ್ತು 6 ನನ್ನ ಮಕ್ಕಳು. ಚಾಸಾ 7 ರಿಂದ 9 ನನಗೆ ಪರಿಚಯ. ಆರೋಪಿತರು ನನ್ನ ಸಂಬಂದಿಕರು. 20 ತಿಂಗಳ ಹಿಂದೆ ಜನ್ನವಾಡ ಗ್ರಾಮದಲ್ಲಿ ಇರುವ ನಮ್ಮ ಹೊಲದಲ್ಲಿ ನಾನು ಕಸ ತೆಗೆಯುತ್ತಾ ಇದ್ದಾಗ ಸಂಜೆ 06.00 ಗಂಟೆ ಸಮಯದಲ್ಲಿ ಆರೋಪಿ ನಂಬರ 1, 2, ಬಂದು ನನಗೆ ರೆಂಡಿ ಎಂದು ಬೈಯುತ್ತಾ ನಮ್ಮ ಹೊಲದಲ್ಲಿ ಯಾಕೇ ಕಸ ತೆಗೆಯುತಿದಿಯಾ ಎಂದು ಕೇಳಿದ್ದರು. ಆರೋಪಿ ನಂಬರ 1 ಮತ್ತು 2 ಕೊಡಲಿ ಗಾವಿನಿಂದ ನನಗೆ ನನ್ನ ನಡಕ್ಕೆ ಮತ್ತು ಬಲಗೈಗೆ ಬಡೆದರು. ಆಗ ಚಾಸಾ 5 ಮತ್ತು 6 ಓಡಿ ಬಂದು ನನ್ನನ್ನು ಬಿಡಿಸಿಕೊಳ್ಳಲು ಬಂದರು. ಚಾಸಾ 5 ರವರಿಗೆ ಆರೋಪಿ ನಂಬರ 1 ಕೊಡಲಿ ಗಾವಿನಿಂದ ತಲೆಗೆ ಹೊಡೆದರು. ಚಾಸಾ 6 ರವರಿಗೆ ಆರೋಪಿ ನಂಬರ 1 ಕೊಡಲಿ ಗಾವಿನಿಂದ ಕೈಗೆ ಹೊಡೆದರು. ಆಗ ಚಾಸಾ 6 ಪ್ರಜ್ಞೆ ತಪ್ಪಿ ಬಿದ್ದರು. ಆಗ ಚಾಸಾ 4 ಓಡಿ ಬಂದು ಚಾಸಾ 6 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಆರೋಪಿ ನಂಬರ 1 ಚಾಸಾ 4 ರವರಿಗೆ ಕಟ್ಟಿಗೆಯಿಂದ ಕೈಗೆ ಹೊಡೆದರು. ಚಾಸಾ 7 ಅಲ್ಲಿಗೆ ಬಂದು ಜಗಳ ಬಿಡಿಸಿದರು. ಜಗಳ ಆದ ನಂತರ ಚಾಸಾ 9 ಬಂದರು.

2. ಆರೋಪಿ ನಂಬರ 3 ಮತ್ತು 4 ರವರು ಬಂದು ನನ್ನ ಸೀರೆಯನ್ನು ಹರಿದು ಅವಮಾನ ಮಾಡಿ ಬೈದರು. ಆರೋಪಿ ನಂಬರ 5 ಮತ್ತು 6 ಹೊಲಸು ಬೈಗೂಳದಿಂದ ಬೈದರು. ಆರೋಪಿ ನಂಬರ 1 ನನಗೆ " ನಿಮ್ಮನ್ನು ಜೀವಂತ ಬಿಡುವುದಿಲ್ಲ ನೀವು ಹೇಗೆ ಜೀವನ ಮಾಡುತ್ತಿರಿ ನೋಡುತ್ತೇವೆ" ಎಂದು ಹೇಳಿದನು.

3. ಚಾಸಾ 5 ಮತ್ತು 6 ರವರನ್ನು ಚಾಸಾ 4 ಯಕ್ಸಂಬಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಗಾಡಿಯಲ್ಲಿ ಎಲ್ಲರೂ ಹೋಗಲು ಆಗದೇ ಇದಿದ್ದರಿಂದ ನಾನು ಮರುದಿನ

ರವಿವಾರ ಇದಿದ್ದರಿಂದ ಸೋಮಾವಾರ ಚಿಕ್ಕೋಡಿ ಆಸ್ಪತ್ರೆಗೆ ಹೋಗಿ ಉಪಚಾರ ಪಡೆದ್ದನು. ನಂತರ ನಾನು ದೂರು ಕೊಡಲು 2-3 ಸಲ ಸದಲಗಾ ಪೋಲಿಸ ಠಾಣೆಗೆ ಹೋದೆನು. ಅವರು ದೂರು ತೆಗೆದುಕೊಳ್ಳಲಿಲ್ಲ. ನಂತರ ನಾನು ಚಿಕ್ಕೋಡಿ ಗೆ ಬಂದು ವಕೀಲರ ಮೂಲಕ ಪಿರ್ಯಾದಿ ಕೊಟ್ಟೆವು. ಸಾಕ್ಷಿ ಈಗ ತಾನು ನೀಡಿದ ದೂರು ಹಾಗೂ ಅದರಲ್ಲಿ ಇರವ ಹೆಬ್ಬೆಟ್ಟು ಸಹಿಗಳನ್ನು ಗುರುತಿಸಿದ್ದರಿಂದ ಖಾಸಗಿ ದೂರನ್ನು ನಿಪಿ 1 ಎಂದು, ಸಾಕ್ಷಿಯ ಹೆಬ್ಬೆಟ್ಟು ಗುರುತನ್ನು ನಿಪಿ 1 ಎ ಮತ್ತು ನಿಪಿ 1 ಬಿ ಎಂದು ಗುರುತಿಸಲಾಯಿತು. ನಾನು ಶಾಲೆ ಕಲಿತಿರುವುದಿಲ್ಲ. ಘಟನೆ ಆದ ದಿನಾಂಕ ನನಗೆ ನೆನಪಿಲ್ಲ.

4. ನಾನು ಖಾಸಗಿ ದೂರ ನೀಡಿದ ನಂತರ ಪೋಲಿಸರು ಜನ್ನವಾಡ ಗ್ರಾಮದ ಶೇರದವಾಡ ರಸ್ತೆ ಯ ಬಳಿ ಇರುವ ನಮ್ಮ ಹೊಲಕ್ಕೆ ಬಂದಿದ್ದರು. ಆಗ ನಾನು ಅಲ್ಲಿ ಇದ್ದೆ. ಪೋಲಿಸರ ಬಂದು ಸ್ಥಳ ನೋಡಿದರು. ಸ್ಥಳದಲ್ಲಿ ಇದ್ದ ಹರಿದ ಸೀರಿಯನ್ನು ಪೋಲಿಸರು ನೋಡಿದರು. ಆ ದಿನ ಪೋಲಿಸರಿಗೆ ನಾನೇ ಜಾಗ ತೋರಿಸಿದೆ. ಆ ದಿನ ನಮಗೆ ಹೊಡೆದ ವ್ಯಕ್ತಿಗಳು ಒಟ್ಟು 6 ಜನ ಇದ್ದರು. ಅವರಲ್ಲಿ ಈ ದಿನ ನ್ಯಾಯಲಯದ ಮುಂದೆ ಇಬ್ಬರು ಇದ್ದಾರೆ. ಸಾಕ್ಷಿ ಆರೋಪಿತರನ ನೋಡಿ ಗುರುತಿಸಿರುತ್ತಾರೆ. ಆರೋಪಿ ನಂಬರ 3 ರಿಂದ 6 ಈ ದಿನ ಹಾಜರಾತಿ ವಿನಾಯತಿ ಕೇಳಿದ್ದು ಮಾನ್ಯ ಆರೋಪಿ ಪರ ವಕೀಲರು ಸಾಕ್ಷಿ ಸದರಿ ಆರೋಪಿತರನ್ನು ಗುರುತಿಸಲು ತಮ್ಮ ತಕರಾರು ಇಲ್ಲ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು ಸಕಾರಣ ಇಲ್ಲದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.</u>

<u>ಮರುವಿಚಾರಣೆಃ ಇಲ್ಲ</u>

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

**ಓ.ಹೆ.ಕೆ.ಸರಿ ಇದೆ.**

**(ಅಶೋಕ ಆರ್ ಹೆಚ್ )**

**1 ನೇ ಹೆಚ್ಚುವರಿ ಪ್ರ.ದ.ನ್ಯಾ.ದಂ.ಗಳು ಚಿಕ್ಕೋಡಿ.**

ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚಿಕ್ಕೋಡಿ.